ಆಗುತ್ತಾ ಇದೆ. ಅದನ್ನು ವಿ.ಐ ಎಸ್.ಎಲ್‌ನವರ ಮ್ಯಾನೇಜ್‌ಮೆಂಟಿಗೆ ಕೊಟ್ಟರೆ ಅದು ಲಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಸರ್ಕಾರದವರ ಅಭಿಪ್ರಾಯವನ್ನು ನಾನು ತಿಳಿದುಕೊಳ್ಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲೀ.—ವಿ ಐ.ಎಸ್.ಎಲ್ ಕಾರ್ಖಾನೆಯವರು ಇದನ್ನು ತೆಗೆದುಕೊಂಡು ನಡೆಸುವಂಥ ಪ್ರಪೋಸಲ್ ಈಗ ಸರ್ಕಾರದವರ ಮುಂದೆ ಇಲ್ಲ. ಈ ಕಚ್ಚಾ ಮಾಲನ್ನು ಸರಬರಾಜು ಮಾಡುವ ವಿಚಾರದಲ್ಲಿ ಕೂಡ ಪ್ರಾಮುಖ್ಯವಾಗಿ ಟಿಸ್ಕೋ ಮತ್ತು ಇತರ ಕಂಪನಿಯವರು ಅವರೆಲ್ಲಾ ಅವರ ಫ್ಯಾಕ್ಟರಿಯಲ್ಲೇ ಅದನ್ನು ತಯಾರು ಮಾಡಿ ಕೊಳ್ಳುತ್ತಾರೆ; ಮತ್ತು ಅದನ್ನು ಸರಬರಾಜು ಮಾಡುತ್ತಾರೆ; ನಾವು ಕೂಡ ಈ ರಾಮೆಟೀರಿಯಲ್ಸನ್ನು ಸಪ್ಲೈ ಮಾಡುವ ದಿಶೆಯಲ್ಲಿ ವಿಚಾರ ಮಾಡುತ್ತಿದ್ದೇವೆ. ಈ ಬಗ್ಗೆ ನಾವು ಕೂಲಂಕಷವಾಗಿ ಪುನರಾಲೋಚನೆ ಮಾಡುತ್ತೇವೆ. ಇನ್ನು ಮ್ಯಾನೇಜ್‌ಮೆಂಟ್ ವಿಚಾರದಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ಈ ಕಚ್ಚಾ ಸಾಮಾನುಗಳನ್ನು ಈಗ ಸದ್ಯಕ್ಕೆ ವಿ.ಐ ಎಸ್.ಎಲ್‌ನಿಂದ ತರಿಸಿಕೊಳ್ಳುವ ಬಗ್ಗೆ ನಾವು ಅದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ಈ ಹಾಸನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯ ಆವರಣದಲ್ಲಿ ಕೆಲವು ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ಮಿಷಿನರಿಗಳನ್ನು ತರಿಸಿ ಇಟ್ಟಿದ್ದಾರೆ, ಅದನ್ನು ಸ್ಟಾರ್ಟ್ ಮಾಡಲಿಲ್ಲ. ಅವುಗಳನ್ನು ೫-೬ ವರ್ಷಗಳ ಹಿಂದೆ ತರಿಸಿದ್ದರೂ ಕೂಡ ಅದನ್ನು ಸ್ಟಾರ್ಟ್ ಮಾಡದೇ ಇರುವುದಕ್ಕೆ ಕಾರಣವೇನು? ಅದನ್ನು ತರಿಸಿದವರು ಯಾರು? ಅದನ್ನು ಸ್ಟಾರ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಮೊದಲನೆಯ ವಿಚಾರ. ಆ ಮೇಲೆ ಈ ಕಿಮ್ಮೋ ಎಲ್ಲದರಲ್ಲೂ ಫೈಲ್ಯೂರ್ ಆಗಿರುವುದರಿಂದ ಅದನ್ನು ಸಪರೇಟ್ ಯೂನಿಟ್ ಮಾಡಬೇಕು ಇದು ಎರಡನೆಯ ವಿಚಾರ. ಏಕೆಂದರೆ ಹಾಸನ ಜಿಲ್ಲೆಯಲ್ಲಿ ಇರತಕ್ಕಂಥಾದ್ದು ಇದು ಒಂದೇ ಒಂದು ಪಬ್ಲಿಕ್ ಸೆಕ್ಟಾರ್. ಇದನ್ನು ಮುಚ್ಚುವ ತಕ್ಕಂಥ ಸ್ಥಿತಿಗೆ ಬಂದರೆ ಈ ರಾಜ್ಯಕ್ಕೇ ಬಹಳ ಲಾಸ್ ಆಗುತ್ತದೆ. ತಾವು ಹೇಗೂ ಇದನ್ನು ವಿ.ಐ.ಎಸ್. ಎಲ್‌ನವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೀರಿ, ಅದು ಹೋಗಲಿ; ಇದನ್ನು ಸಪರೇಟ್ ಯೂನಿಟ್ ಮಾಡುವುದಕ್ಕೆ ತಾವು ಯೋಚನೆ ಮಾಡುತ್ತೀರಾ? ಈ ಬಗ್ಗೆ ಸರ್ಕಾರದವರ ಅಭಿಪ್ರಾಯವೇನು?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಆ ಫ್ಯಾಕ್ಟರಿಗೆ ವಿಶೇಷವಾದಂಥ ಕಾಯಕಲ್ಪ ಬೇಕು ಏನ್ನುವುದನ್ನು ನಾನು ಸರ್ವಥಾ ಒಪ್ಪುತ್ತೇನೆ. ನಿನ್ನೆ ತಾನೆ ಕಚ್ಚಾ ಮಾಲು ಸಪ್ಲೈ ವಿಚಾರದಲ್ಲಿ ವಿ.ಐ. ಎಸ್.ಎಲ್ ಜೊತೆಯಲ್ಲಿ ಮಾತುಕತೆ ನಡೆಸಿದ್ದೇವೆ. ಬೇರೆ ಬೇರೆ ಕಾರ್ಯಕ್ರಮ ತೆಗೆದುಕೊಳುತ್ತಾ ಇದ್ದೇವೆ. ಮಾನ್ಯ ಸದಸ್ಯರು ಹೇಳುವಂಥ ವಿಚಾರ ಸರಿಯಲ್ಲ ಎಂದು ಹೇಳುತ್ತಾ ಇಲ್ಲ ಇದನ್ನು ಇಂಪ್ರೂವ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

Misappropriations in Co-operative Societies in Mysore District.

395 H. VISWANATH (Krishnarajanagar).—Will the Minister for Co-operation be pleased to state :—

(a) the total amount mis-appropriated so far in a the Co-operative Societies in Mysore District (Taluk wise details may be furnished) ;

(b) the number of Civil & Criminal cases filed against mis-appropriation and the number of cases in which action has not been taken to file Civil & Criminal cases ? (Talukwise informations may be furnished).

SRI A. B. JAKANUR (Minister for Co-operation).—

(a) In all a total sum of Rs. 29,64,951-94 is mis-appropriated in 248 cases in 180 Co-operative Societies of 11 Taluks of Mysore District.

Sl. No.	Name of the Taluk	No. of Co-operative Societies	Cases	Amount mis-appropriated Rs.
1	Mysore ...	25	27	6,68,448-61
2	T. Narasipura ...	21	21	5,19,766-11
3	Kollegal ...	20	21	1,40,642-47
4	Nanjangud ...	25	32	4,60,166-54
5	Chamarajanagar ..	13	20	1,03,910-40
6	Yelandur ...	5	8	85,034-63
7	Gundlupet ...	15	18	1,54,817-54
8	Hunsur ...	14	23	2,35,695-15
9	K.R. Nagar ...	21	50	3,98,823-53
10	Piriyapatna ...	9	12	80,484-51
11	H.D. Kote ...	12	16	1,17,612-45
		180	248	29,64,941-94

(b) The Talukwise Civil & Criminal cases filed and the cases not filed against mis-appropriation of funds so far in Mysore District are as follows.

Sl. No.	Name of the Taluk	Total No. of cases	No. of combined Civil & Criminal cases filed	No. of combined Civil & Criminal cases not filed
1.	Mysore ...	27	13	14
2.	T. Narasipura ...	21	3	8
3.	Kollegal ...	21	6	15
4.	Nanjangud ...	32	9	23
5.	Chamarajanagar ...	20	2	18
6.	Yelandur ...	8	3	5
7.	Gundlupet ...	18	2	16
8.	Hunsur ...	23	3	20
9.	K.R. Nagar ...	50	9	41
10.	Periyapatna ...	12	...	12
11.	H.D. Kote ...	16	...	16
	Total ...	248	50	198

ಶ್ರೀ ಎಚ್. ವಿಶ್ವನಾಥ್.—ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ಈ ಸಹಕಾರ ಸಂಘದಲ್ಲಿ ಆಗಿರುವ ತಕ್ಕ ಹಣದ ದುರುಪಯೋಗ ನೋಡಿದರೆ ಚಾಬಲ್ ಕಣಿವೆ ದರೋಡೆಯನ್ನು ಮೀರಿಸುವಂತಿದೆ. ತಾವು ಕೊಟ್ಟಿರತಕ್ಕಂಥ ೩೦ ಲಕ್ಷ ರೂಪಾಯಿ ಹಣದ ದುರುಪಯೋಗ ಮೈಸೂರು ಜಿಲ್ಲೆ ಒಂದರಲ್ಲೇ ಆಗಿದೆ. ನನಗೆ ಬಂದಿರತಕ್ಕ ವರದಿ ಪ್ರಕಾರ ಒಂದೂವರೆ ಕೋಟಿ ರೂ. ಮೀರಿದೆ. ಅಧ್ಯಕ್ಷರೆ, ತಾವೂ ಮೈಸೂರು ಜಿಲ್ಲೆಯವರು. ಕೃಷ್ಣರಾಜನಗರ ತಾಲ್ಲೂಕು ಒಂದರಲ್ಲಿ ೨೧ ಸೊಸೈಟಿಗಳಲ್ಲಿ ಆಗಿರತಕ್ಕ ಪ್ರಕರಣಗಳು ೫೦. ಇದಕ್ಕೆ ಕಾರಣವೇನು ಸ್ವಾಮಿ. ಉತ್ತರದಲ್ಲಿ ೩೦ ಲಕ್ಷ ರೂಪಾಯಿ ದುರುಪಯೋಗವಾಗಿದೆ ಯೆಂದು ಹೇಳಿದ್ದೀರಲ್ಲ, ಇದು ಯಾವ ತಾರೀಖಿಗೆ. ಟಿಎಪಿಸಿಎಂ, ಪಿ.ಎಲ್.ಡಿ, ಬ್ಯಾಂಕುಗಳಲ್ಲಿ ಮೈಸೂರು ಜಿಲ್ಲೆಯೊಂದರಲ್ಲೇ ಒಂದು ಕೋಟಿ ಮೀರುತ್ತದೆ ಇದರಿಂದ ನಾನು ಮಂತ್ರಿಗಳಲ್ಲಿ ಕೇಳಿ ಕೊಳ್ಳುವುದೇನೆಂದರೆ, ತಾವು ಕೊಟ್ಟಿರತಕ್ಕ ಅಂಕಿಅಂಶಗಳು ಯಾವತ್ತಿನ ತಾರೀಖಿನತನಕ ಬರುತ್ತದೆ ಎಂದು ಹೇಳಬೇಕು?

ಶ್ರೀ ಎ.ಬಿ. ಜಕನೂರ್.—ಈಗ ಆಡಿಟ್ ರಿಪೋರ್ಟ್ ಪ್ರಕಾರ ಅಂಕಿಅಂಶಗಳನ್ನು ಕೊಡಲಾಗಿದೆ. ಬೇರೆ ಬೇರೆ ಸೊಸೈಟಿಗಳದ್ದು ಬೇರೆ ಬೇರೆ ದಿನಾಂಕಗಳಲ್ಲಿದು ಆಡಿಟ್ ಆಗಿದೆ. ಈವರೆಗೆ ಕಂಡದ್ದು ೨೯, ೬೪, ೯೪೧–೯೪ ರೂಪಾಯಿಗಳು.

ಶ್ರೀ ಎಚ್. ವಿಶ್ವನಾಥ್.—ಇಷ್ಟು ಹಣ ಯಾವ ತಾರೀಖಿಗೆ ದುರುಪಯೋಗವಾಗಿದೆ.

ಶ್ರೀ ಎ.ಬಿ. ಜಕನೂರು.—ಬೇರೆ ಬೇರೆ ತಾರೀಖಿಗಳೆಂದು ಆಗಿದೆ.

ಶ್ರೀ ಬಿ. ರಾಜುಗೌಡ.—೨೪೮ ಪ್ರಕರಣಗಳಲ್ಲಿ ೩೦ ಲಕ್ಷ ರೂಪಾಯಿ ದುರುಪಯೋಗವಾಗಿದೆ, ೫೦ ಪ್ರಕರಣಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಕೇಸ್ ಹಾಕಿದ್ದೇವೆಂದು ಹೇಳಿದ್ದೀರಿ. ಉಳಿದ ಪ್ರಕರಣಗಳ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ ಏಕೆ ಸ್ವಾಮಿ?

ಶ್ರೀ ಎ.ಬಿ. ಜಕನೂರ್.—ಕ್ರಿಮಿನಲ್ ಕೇಸ್ ಹಾಕಿದೆ. ಅದರಲ್ಲಿ ಸಿವಿಲ್ ಆಕ್ಷನ್ ೬೩ರಲ್ಲಿ ತೆಗೆದು ಕೊಂಡಿದ್ದೇವೆ. ೧೮೫ ಕೇಸ್‌ಗಳಿಗೆ ಸಿವಿಲ್ ಅಥವಾ ಕ್ರಿಮಿನಲ್ ಕೇಸ್ ಫೈಲ್ ಮಾಡಿ ಎಂದು ಇನ್ ಸ್ಟ್ರಕ್ಷನ್ಸ್ ಕೊಟ್ಟಿದ್ದೇವೆ. ೯೮ ಕೇಸ್‌ಗಳಲ್ಲಿ ೪೧ಕ್ಕೆ ಇನ್‌ವೆಸ್ಟಿಗೇಷನ್ ಆಗುತ್ತಾ ಇದೆ, ಮತ್ತು ೪೭ಕ್ಕೆ ಚಾರ್ಜ್‌ಶೀಟ್ ಫೈಲ್ ಮಾಡಿದ್ದಾರೆ. ಯಾವುದನ್ನೂ ಮುಚ್ಚಿಡುವ ಪ್ರಶ್ನೆಯಿಲ್ಲ.

ಶ್ರೀ ಎಚ್. ವಿಶ್ವನಾಥ್.—ಅಧ್ಯಕ್ಷರೆ ಹಣವನ್ನು ತುಂಬದೇ ಇದ್ದರೆ ಕೇಸ್ ಹಾಕುವುದು ಸಹಜ, ಹಾಕಿತ್ತೀರಿ ಆದರೆ ಎಷ್ಟೋ ಪ್ರಕರಣಗಳಲ್ಲಿ ಹಣ ತುಂಬಿದವರ ಮೇಲೂ ಕೇಸ್ ಹಾಕಿದ್ದೀರಿ. ಕೊ-ಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರ್, ಜೆ.ಆರ್.ಎ.ಆರ್.ಡಿ.ಆರ್ ಇವರೆಲ್ಲಾ ಏನು ಮಾಡುತ್ತಾ ಇರುತ್ತಾರೆ, ಎಷ್ಟೊಂದು ಕೇಸುಗಳನ್ನು ಉಳಿಸಿಕೊಂಡಿದ್ದಾರಲ್ಲಾ?

ಶ್ರೀ ಎ.ಬಿ. ಜಕನೂರ್.—ಹಣ ತುಂಬಿದರೆ ಕೇಸ್ ಹಾಕಬಾರದು ಎಂದು ಅರ್ಥವಲ್ಲ. ಐದಾರು ರೂಪಾಯಿ ಬಾಕಿ ಇದ್ದರೆ ಕೇಸ್ ಹಾಕುವುದಿಲ್ಲ. ಬಹಳ ಹಣ ಇದ್ದರೆ ಕೇಸ್ ಹಾಕುತ್ತಾರೆ. ಆಡಿಟ್ ರಿಪೋರ್ಟ್ ಬರದೆ ಪೋಲೀಸರು ಕೇಸ್ ತೆಗೆದುಕೊಳ್ಳುವುದಿಲ್ಲ. ಎಲ್ಲಾ ಪ್ರಕರಣಗಳಲ್ಲೂ ದಕ್ಷತೆವಹಿಸಿ ಸಾಧ್ಯವಾದಷ್ಟು ಬೇಗನೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ವಿಶ್ವನಾಥ್.—ಒಬ್ಬ ಸೆಕ್ರೆಟರಿ ಒಂದೂವರೆ ಲಕ್ಷ ರೂಪಾಯಿ ದುರುಪಯೋಗ ಮಾಡಿದ್ದಾನೆ: ಅವನನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಅವನಿಂದ ಇದುವರೆಗೆ ಪುಸ್ತಕ ವಸೂಲು ಮಾಡಿಲಿಲ್ಲ. ಜೆ.ಆರ್;ಡಿ.ಆರ್. ಹೋದರೂ ಕೂಡ ಅವನಿಂದ ಪುಸ್ತಕ ವಸೂಲು ಮಾಡು ವುದಕ್ಕೆ ಆಗಲಿಲ್ಲ. ಅದಕ್ಕೆ ಏನಾದರೂ ಕಾನೂನಿನ ಅಡ್ಡಿ ಇದೆಯೇ ಅಥವಾ ಇನ್ಯಾವುದಾದರೂ ಕೈ ಅಡ್ಡಿ ಇದೆಯೇ?

ಶ್ರೀ ಎ.ಬಿ. ಜಕನೂರ್.—ಮಾನ್ಯ ಸದಸ್ಯರು ಹೇಳುವುದು ಯಾವ ಪ್ರಕರಣ ಎಂದು ಗೊತ್ತಾಗ ಲಿಲ್ಲ. ಮಾನ್ಯ ಸದಸ್ಯರು ಹೆಸರು ಹೇಳಿದರೆ ಏನಾಗಿದೆಯೆಂದು ವಿಚಾರ ಮಾಡುತ್ತೇನೆ.